ಶ್ರೀ ಎಂ. ವೈ. ಘೋರ್ಪಡೆ.—ಎಷ್ಟು ಹಣ ಖರ್ಚು ಆಗಿದೆ, ಅದರ ಫಿಗರ್ ಕೊಟಿದ್ದೇವೆ, ಇನ್ನು ಮಾರ್ಚಿನಲ್ಲಿ ಖರ್ಚಾಗುವುದಿದೆ. ಮತ್ತೆ ಇನ್ನು ಏನಾದರೂ ಉಳಿತಾಯವಾಗುವುದಾದರೆ ಇಲ್ಲಿ ಅವಶ್ಯಕತೆ ಹೆಚ್ಚಿಗೆ ಇದ್ದರೆ, ಆ ರೀತಿ ಮಾಡುವುದಕ್ಕೆ ಏನು ಸಾಧ್ಯ ಅದನ್ನು ನಾನು ಮಾಡಲು ನಾನು ಹೇಳುತ್ತೇನೆ.

ಅಧ್ಯಕ್ಷರು. ಶ್ರೀ ರಾಜುಗೌಡರವರೇ, ತಮ್ಮ ಪ್ರಶ್ನೆಗೆ ೩೦೩ (೭೬೩) ಮಾನ್ಯ ಮುಖ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

ಶಿಕಾರಿಪುರ ತಾಲ್ಲೂಕ್ ಕೊಟ್ರಳ್ಳಿ ಬೀಜೋತ್ಪಾದನಾ ಕೇಂದ್ರ

೩೦೬ (೪೬೧) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿ ಪುರ).—ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;—

ಅ) ಶಿಕಾರಿಪುರ ತಾಲ್ಲೂಕು ಕೊಟ್ರಳ್ಳಿ ಬೀಜೋತ್ಪಾದನಾ ಕೇಂದ್ರ ಕಳೆದ ೩ ವರ್ಷಗಳಿಂದ ಮಾಡಿದ ಪ್ರಗತಿ ಏನು ?

ಆ) ತಾಲ್ಲೂಕಿನ ರೈತರಿಗೆ ಈ ಕೇಂದ್ರದಿಂದ ಯಾವ ರೀತಿ ಸಹಾಯವಾಗುತ್ತಿದೆ ?

ಇ) ಅಲ್ಲಿರುವ ಕಟ್ಟಡಗಳು ಬಿದ್ದಿರುವುದು ನಿಜವೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು). —

ಅ) ಕೊಟ್ರಹಳ್ಳಿ ಬೀಜೋತ್ಪಾದನಾ ಕೇಂದ್ರದಲ್ಲಿ ಮುಖ್ಯವಾಗಿ ವಿವಿಧ ಕೃಷಿ ಬೆಳೆಗಳ ಮೂಲತಃ ಪ್ರಮಾಣಿತ ಬೀಜೋತ್ಪಾದನೆ ತೆಗೆದುಕೊಳ್ಳಲಾಗುತ್ತಿದೆ. ಕಳೆದ ಮೂರು ವರ್ಷಗಳ ಪ್ರಗತಿ ಕೆಳಕಂಡಂತಿವೆ.

ವರ್ಷ	ಬಿತ್ತನೆಯಾದ ಕ್ಷೇತ್ರ (ಹೆಕ್ಟೇರು)	ಉತ್ಪನ್ನ ಕ್ವಿಂಟಾಲ್ ಗಳಲ್ಲಿ)	ಷರಾ
೧೯೯೦–೯೧	೭.೨೦	೧೧೨.೩೧	---
೧೯೯೧–೯೨	೮.೦೦	೩೮.೨೫	ಅತಿ ಮಳೆಯಿಂದಾಗಿ ಬೆಳೆ ಹಾನಿಯಾಗಿದ್ದು ಇಳುವರಿ ಕಡಿಮೆ ಇದೆ.
೧೯೯೨–೯೩	೪.೮೦	---	ಅತಿವೃಷ್ಟಿಯಿಂದಾಗಿ ಯಾವುದೇ ರೀತಿಯ ಉತ್ಪನ್ನ ಬಂದಿಲ್ಲ.

ಆ) ಸದರಿ ಕೇಂದ್ರದಲ್ಲಿ ಉತ್ಪಾದಿಸಿದ ಮೂಲತ ಪ್ರಮಾಣಿತ ಬಿತ್ತನೆ ಬೀಜಗಳನ್ನು ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಮರು ಉತ್ಪಾದನೆಗಾಗಿ ಪಹಿಣ ಕೊಡಲಾಗುತ್ತಿದೆ. ಹೀಗೆ ಬೀಜ ನಿಗಮದಿಂದ ಉತ್ಪಾದಿಸಿದ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸದರಿ ಕೇಂದ್ರದಲ್ಲಿನ ವಿವಿಧ ಕಟ್ಟಡಗಳ ಪೈಕಿ ಉಗ್ರಾಣ ಮೇಲ್ಛಾವಣಿ ಮಾತ್ರ ಬಿದ್ದು ಹೋಗಿರುತ್ತದೆ. ದುರಸ್ತಿಗಾಗಿ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ. ಶಿಕಾರಿಪುರ ಕೊಟ್ರಹಳ್ಳಿಯಲ್ಲಿ ಬೀಜೋತ್ಪಾದನಾಕೇಂದ್ರಗಳು ಇವೆ. ಅಲ್ಲಿಏನು ಉತ್ಪಾದನಾಮಾಡುತ್ತಿದ್ದಾರೆಂದು ಕೇಳಿದ್ದೇನೆ. ಕಳೆದ ಮೂರು ವರ್ಷಗಳಿಂದ ಅಂದರೆ ೧೯೯೩–೯೪ಕ್ಕೂ ಸೇರಬೇಕಾಗುತ್ತದೆ. ಆದರೆ ಅದನ್ನು ತಾವು ಹೇಳಿಲ್ಲ. ೧೯೯೦–೯೧ರಲ್ಲಿ ೭.೨೦ ಹೆಕ್ಟೇರುನಲ್ಲಿ ೧೧೨ ಕ್ವಿಂಟಾಲ್ ೩೧ ಕೆ. ಜಿ. ಮತ್ತು ೧೯೯೧–೯೨ರಲ್ಲಿ ೮ ಹೆಕ್ಟೇರ್‌ನಲ್ಲಿ ೩೮ ಕ್ವಿಂಟಾಲ್ ೨೫ ಕೆ. ಜಿ. ಉತ್ಪನ್ನ ಮಾಡಿದ್ದೇವೆಂದು ಹೇಳಿದ್ದೀರಿ. ೧೯೯೨–೯೩ರಲ್ಲಿ ಏನೂ ಉತ್ಪಾದನೆಯಾಗಿಲ್ಲ; ೧೯೯೩–೯೪ರಲ್ಲಿ ನನಗೆ ಗೊತ್ತಿದೆ. ಏನೂ ಮಾಡಿಲ್ಲ ಅಲ್ಲಿ. ರಾಜ್ಯದಲ್ಲಿ ಈ ರೀತಿ ಬೀಜೋತ್ಪಾದನಾ ಕೇಂದ್ರಗಳು ಒಟ್ಟು ಎಷ್ಟು ಇವೆ. ರೈತರಿಗೆ ಬೇಕಾದಂತಹ ಈ ರೀತಿ ಪ್ರಮಾಣಿಕ ಬಿತ್ತನೆ ಬೀಜ

ಗಳನ್ನು ಇಲ್ಲಿ ಉತ್ಪಾದನೆ ಮಾಡಿ ರಾಜ್ಯದ ರೈತನಿಗೆ ಮರು ಉತ್ಪಾದನೆಗೆ ಏನು ಕೊಡುತ್ತಿದ್ದೀರಿ ಇದರ ಬಗ್ಗೆ ಹೇಳ ಬೇಕಾದರೆ ಈ ಕೇಂದ್ರಗಳಲ್ಲಿ ಈ ರೀತಿ ಬಿತ್ತನೆಗೆ ಅವಕಾಶವಾಗದಿದ್ದರೆ, ಕಳೆದ ೨ ವರ್ಷ ಗಳಿಂದ ಏನೂ ಉತ್ಪಾದನೆ ಯಾಗದಿದ್ದರೆ ಏನು ಪ್ರಯೋಜನ ? ಸರ್ಕಾರಿ ನೌಕರರನ್ನು ಪುಕ್ಕಟೆಯಾಗಿ ಸಂಬಳವನ್ನು ಕೊಟ್ಟು ಕೊಂಡಿದ್ದೀರಿ ನಿಮ್ಮ ಕೃಷಿ ಇಲಾಖೆ ಅಲ್ಲಿ ಏನು ಮಾಡುತ್ತಿದೆ ಎಂಬುದನ್ನು ನೋಡಿಕೊಂಡು ಒರುವಂಥ ಪ್ರಯತ್ನವನ್ನು ಒಬ್ಬ ಅಧಿಕಾರಿ ಸಹ ಮಾಡಲಿಲ್ಲ. ಇದು ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದ್ದು, ಬಿತ್ತಕ್ಕೋಸ್ಕರ ಕಳೆದ ೨ ವರ್ಷದಿಂದ ಏನು ಉತ್ಪಾದನೆ ಆಗಿಲ್ಲ. ಜನರ ದೃಷ್ಟಿ ಯಲ್ಲಿ ಅದು ಇದ್ದರೂ ಸತ್ತಂತೆ ಆಗಿದೆ. ರಾಜ್ಯದಲ್ಲಿ ಈ ರೀತಿಯಾಗಿ ಎಷ್ಟು ಬಿತ್ತನೆ ಕೇಂದ್ರಗಳು ಇದೆ. ಇವತ್ತು ಅಗತ್ಯವಿರುವಂಥ ಬಿತ್ತನೆ ಬೀಜಗಳನ್ನು ಉತ್ಪಾದನೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.–ಒಟ್ಟು ರಾಜ್ಯದಲ್ಲಿ ೬೫ ಬೀಜೋತ್ಪಾದನಾ ಕೇಂದ್ರಗಳು ಇವೆ. ಇವುಗಳಲ್ಲಿ ೧೯ ಬೀಜ ಸಂಸ್ಕರಣಾ ಘಟಕಗಳು ಇವೆ. ಇದರಲ್ಲಿ ರಾಜ್ಯ ಬೀಜ ನಿಗಮವು ಸೇರುವುದು ೧೯೯೦–೯೧ ರಲ್ಲಿ ೭.೨೦ ಹೆಕ್ಟೇರು ಭೂಮಿಯಲ್ಲಿ ೧೧೨.೩೧ ಉತ್ಪಾದನೆಯಾಗಿದೆ. ೧೯೯೧–೯೨ರಲ್ಲಿ ೮ ಹೆಕ್ಟೇರು ಭೂಮಿಯಲ್ಲಿ ಪ್ರಯೋಗ ಮಾಡಿದ್ದು ಹೆಚ್ಚು ಮಳೆಯಿಂದಾಗಿ ಬೆಳೆ ಹಾನಿಯಾಗಿದ್ದು ಇಳುವರಿ ತೀರಾ ಕಡಿಮೆ ಆಗಿದೆ, ೩೮.೨೫ ಕ್ವಿಂಟಾಲ್ ಉತ್ಪನ್ನವಾಗಿದೆ. ಮತ್ತೆ ೧೯೨೨–೯೩ ರಲ್ಲಿ

೧೧.೫೦ ಎ. ಎಂ.

೪.೮೦ ಹೆಕ್ಟೇರ್ ಅತಿವೃಷ್ಟಿಯಿಂದಾಗಿ ಯಾವುದೇ ರೀತಿಯಲ್ಲಿ ಉತ್ಪನ್ನ ಬಂದಿಲ್ಲ. ಈ ಮಧ್ಯೆ ಏನಾಗಿದೆಯೆಂದರೆ ಒಟ್ಟು ಕೇಂದ್ರದಲ್ಲಿ ಇರತಕ್ಕಂತಹ ಕಟ್ಟಡಗಳ ಪೈಕಿ ಉಗ್ರಾಣದ ವೆಂಟಿಲ್ಯೂಷನ್ ಮಾತ್ರಬಿದ್ದು ಹೋಗಿರುತ್ತದೆ. ದುರಸ್ತಿಗಾಗಿ ಈ ಕ್ರಮ ಕೈಗೆತ್ತಿಕೊಳ್ಳಲಾಗಿದೆ. ಇಷ್ಟು ನನಗೆ ಅಂಕಿ ಅಂಶಗಳು ಕಳುಹಿಸಿಕೊಟ್ಟಿರುವುದು. ಇನ್ನು ಮಾನ್ಯ ಸದಸ್ಯರು ಹೇಳಿದಹಾಗೆ ನಾನು ಈ ಅಧಿವೇಶನ ಆದಕೂಡಲೇ ಆ ಸ್ಥಳದಲ್ಲಿ ಏನಿದೆ ಎಂಬುದರ ಬಗ್ಗೆ ಪೂರ್ತಿಯಾದ ಅಂಕಿ ಅಂಶಗಳನ್ನು ಸಂಗ್ರಹಿಸಿ ಅಲ್ಲಿ ಅಗತ್ಯವಾಗಿ ಆಗಬೇಕಾದಂಥ ಕೆಲವು ಯಾವುದು ಎಂಬುದನ್ನು ಇಲಾಖೆಯಿಂದ ತಿಳಿದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ಮಾನ್ಯ ಸದಸ್ಯರಿಗೆ ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.–ನನ್ನ ಉದ್ದೇಶ ಇಷ್ಟೇ. ನಾನೂ ಆ ಕ್ಷೇತ್ರದವನು ನಾನು ಪ್ರಶ್ನೆ ಕೇಳಿ ಇಕ್ಕಟ್ಟಿನಲ್ಲಿ ನಿಮ್ಮನ್ನು ಸಿಕ್ಕಿಸುವುದಕ್ಕೆ ಇಷ್ಟಪಡುವುದಿಲ್ಲ. ಅದು ಇದ್ದರೂ ರೈತರ ಪಾಲಿಗೆ ಏನೂ ಉಪಯೋಗವಾಗುತ್ತಿಲ್ಲ. ದಯವಿಟ್ಟು ನಿಮ್ಮ ಉನ್ನತಾಧಿಕಾರಿಯನ್ನು ಕಳುಹಿಸಿ, ಇಷ್ಟೊಂದು ನೌಕರಿದಾರರು ಇದ್ದು ಅದರ ಉಪಯೋಗ ಏನು ಆಗಬೇಕು ಅದು ಆಗದೇ ಅಲ್ಲಿ ಕಳೆದ ಮೂರು ವರ್ಷದಿಂದ ಅಲ್ಲಿ ಯಾವುದೇ ಉತ್ಪನ್ನ ಆಗುತ್ತಿಲ್ಲ. ಅದಕ್ಕೋಸ್ಕರ ಒಂದು ತನಿಖೆ ಮಾಡಿ, ಈ ರೀತಿ ಬೀಜೋತ್ಪಾದನಾ ಕೇಂದ್ರಗಳು ಸರಿಯಾದ ರೀತಿಯಲ್ಲಿ ನಡೆಯುವಂತಹ ಕಡೆ ಮಾಡಬೇಕು. ಅದೇ ರೀತಿ ಪರಿಸ್ಥಿತಿ ಇನ್ನೂ ಬೇರೆ ಕಡೆ ಇದೆ. ಇನ್ನು ಇನ್ನೊಂದು ತಿಂಗಳಲ್ಲಿ ಮಳೆಗಾಲ ಪ್ರಾರಂಭ ವಾಗುತ್ತಿದೆ. ಈ ಸಾರಿ ಹತ್ತಿ ಬೆಲೆ ಬಹಳ ಚೆನ್ನಾಗಿ ಇರುವುದರಿಂದ ರಾಜ್ಯದ್ಯಂತ ದೊಡ್ಡ ಪ್ರಮಾಣ ದಲ್ಲಿ ಬೆಳೆಯಬೇಕು ಎಂದು ಇದ್ದಾರೆ. ನಿಮ್ಮ ಇಲಾಖೆಯಿಂದ ಬೇರೆ ಜಿಲ್ಲೆಗಳಿಗೆ ಹೋಗಿ ನಾಸು ವಿಚಾರಿಸಿದರೂ ಸಹ ಇವತ್ತು ಅಗತ್ಯ ಇರುವಂತಹ ಹೈಬ್ರಿಡ್ ಹತ್ತಿ ಬೀಜ ಏನು ಬೇಕಾಗಿದೆ ಅದನ್ನು ಸಂಗ್ರಹಣೆ ಮಾಡುವ ಬಗ್ಗೆ ತಾವು ಒಂದು ವಿಶೇಷವಾದ ಕ್ರಮವನ್ನು ತೆಗೆದುಕೊಂಡಿಲ್ಲ. ಅದಕ್ಕೆ ತಾವು ಒಂದು ಆಶ್ಯೂರೆನ್ಸ್ ಕೊಡುತ್ತೀರಾ? ಇವತ್ತು ಹತ್ತಿ ಬೆಲೆ ಜಾಸ್ತಿ ಇರುವಂತಹ ಸಂದರ್ಭದಲ್ಲಿ ಈ ಮುಳಿಗಾಲಕ್ಕೆ ರೈತರಿಗೆ ಹೈಬ್ರಿಡ್ ಬಿತ್ತನೆ ಬೀಜ ಬೇಕಾಗಿದೆ ಅದನ್ನು ಸಂಗ್ರಹ ಮಾಡಿ ವಿತರಣೆ ಮಾಡುವಂತಹ ಪ್ರಮಾಣಿಕ ಪ್ರಯತ್ನ ರಾಜ್ಯದ್ಯಂತ ಮಾಡುವುದಕ್ಕೆ ಏನಾದರೂ ವಿಶೇಷ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.– ಈಗಾಗಲೇ ನಾನು ಹೇಳಿದೆ. ಸ್ಥಳವನ್ನು ಪರಿಶೀಲನೆ ಮಾಡಿ ಅಲ್ಲಿ ಏನೇನು ತೊಂದರೆಗಳು ಆಗಿವೆ. ಬಿತ್ತಕ್ಕೋಸ್ಕರ ತೊಂದರೆಯಾಯಿತು, ಅದನ್ನು ಬಗೆಹರಿಸುವುದಕ್ಕೆ ಸಾಧ್ಯವೇ ಮತ್ತು ಆದಷ್ಟು ಬೇಗ ಈ ಉತ್ಪನ್ನ ಹೆಚ್ಚು ಮಾಡುವುದಕ್ಕೆ ಇನ್ನು ಏನೇನು ಕ್ರಮ ಕೈಗೊಳ್ಳ ಬೇಕು ಎಂಬ ಬಗ್ಗೆ ಅಂಕಿ ಅಂಶಗಳನ್ನೆಲ್ಲಾ ಸಂಗ್ರಹಿಸಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದರ ಬಗ್ಗೆ ಹಾಗೆ ಮಾಡಿ, ನಾನು ಇನ್ನೊಂದು ಉಪ ಪ್ರಶ್ನೆ ಕೇಳಿದ್ದೆ. ಇದಕ್ಕೆ ಸಂಬಂಧ ಇಲ್ಲ ಎಂದು ತಾವು ಹೇಳಬಹುದು. ಆದರೆ ರಾಜ್ಯದ ರೈತರ ಹಿತದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ. ನಾವು ಇವತ್ತು ಸದನ ಮುಂಗಿಸುತ್ತಿದ್ದೇವೆ. ನಾನು ತಮ್ಮಲ್ಲಿ ವಿನಂತಿ ಮಾಡುವುದು ಏನೆಂದರೆ ತಮ್ಮ ಇಲಾಖೆಯಿಂದ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಈ ಮಳೆಗಾಲದಲ್ಲಿ ಹೈಬ್ರಿಡ್ ಹತ್ತಿ ಬಿತ್ತನೆ ಬೀಜಕ್ಕೆ ರಾಜ್ಯದ್ಯಂತ ಬೇಡಿಕೆ ಇದೆ. ಅದನ್ನು ಸಂಗ್ರಹ ಮಾಡುವ ಸಲುವಾಗಿ ತಮ್ಮಿಂದ ಏನೂ ವಿಶೇಷ ಪ್ರಯತ್ನವಾಗಿಲ್ಲ. ಬಿತ್ತನೆ ಬೀಜ ಇಲ್ಲದೆ ನಾಳೆ ಹತ್ತಿ ಬಿತ್ತನೆ ಮಾಡುವುದಕ್ಕೆ ಆಗದೇ ರೈತರು ಕಂಗಾಲಾಗುವಂತಹ ಪರಿಸ್ಥಿತಿ ಇದೆ, ರೈತನಿಗೆ ಹತ್ತಿ ಒಳ್ಳೆಯ ಬೆಲೆ ಸಿಗುವುದರಿಂದ ಆ ಕಡೆಗೆ ವಿಶೇಷ ಗಮನ ಕೊಡುತ್ತಿದ್ದಾನೆ. ಈ ಹೈಬ್ರಿಡ್ ಹತ್ತಿ ಬೀಜಗಳನ್ನು ಸಂಗ್ರಹಣೆ ಮಾಡಿ ವಿತರಣೆ ಮಾಡುವುದಕ್ಕೆ ವಿಶೇಷ ಕಾರ್ಯಕ್ರಮ ತೆಗೆದುಕೊಂಡು ಆ ಕಡೆ ಗಮನ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಅತ್ಯಂತ ಅಗತ್ಯವಾಗಿ ಆಗಬೇಕಾದ ಕೆಲಸ ಎಂದು ನಾನು ಭಾವಿಸುತ್ತೇನೆ. ಅಂಕಿ ಅಂಶಗಳನ್ನು ಎಷ್ಟು ಕಲೆಕ್ಟ್ ಮಾಡುವುದಕ್ಕೆ ಸಾಧ್ಯ ಅದನ್ನೆಲ್ಲಾ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ನಾನು ತಿಳಿಸುತ್ತೇನೆ.

ಸಹಕಾರಿ ಸಂಘಗಳ ಸಂಖ್ಯೆ

೩೦೮ (೬೧೫) ಶ್ರೀಮತಿ ಸುಮಾವಸಂತ (ವೀರಾಜಪೇಟೆ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸೇವಾ ಸಹಕಾರ ಸಂಘಗಳಿವೆ?

(ಆ) ಈ ಪೈಕಿ ಕೊಡಗು ಜಿಲ್ಲೆಯಲ್ಲಿ ಎಷ್ಟು ಸಹಕಾರ ಸಂಘಗಳು ಲಾಭ ಮತ್ತು ನಷ್ಟದಲ್ಲಿವೆ ?

(ಇ) ನಷ್ಟದಲ್ಲಿ ನಡೆಯುತ್ತಿದ್ದರೆ ಅದಕ್ಕೆ ಕಾರಣಗಳೇನು?

(ಈ) ನಷ್ಟದಲ್ಲಿ ನಡೆಯುತ್ತಿದ್ದಲ್ಲಿ ಸರಕಾರ ಅದನ್ನು ನಡೆಸಲು ಏನು ಕ್ರಮ ಕೈಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು).—

(ಅ) ೪,೫೩೩.

(ಆ) ೩೭ ಸಂಘಗಳು ಲಾಭದಲ್ಲಿವೆ ಮತ್ತು ೩೪ ಸಂಘಗಳು ನಷ್ಟದಲ್ಲಿವೆ.

(ಇ) ಸಾಕಷ್ಟು ಪ್ರಮಾಣದಲ್ಲಿ ಸಾಲದ ವ್ಯವಹಾರ ನಡೆಯದೆ ಇರುವುದು ಹಾಗು ಸಾಲ ವಸೂಲಾತಿಯಾಗದೇ ಇರುವುದು, ಹಣದ ದುರುಪಯೋಗವಾಗಿರುವುದು, ಸ್ಥಿರಾಸ್ತಿ ಮೇಲೆ ಸವಕಳಿ ತೆಗೆದಿರುವುದು.

(ಈ) ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಮತ್ತು ಸಾಲ ವಸೂಲಾತಿಯನ್ನು ಹೆಚ್ಚಿಸಿ ನಷ್ಟದಲ್ಲಿ ನಡೆಯುತ್ತಿರುವ ಸಂಘಗಳ ನಷ್ಟವನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀಮತಿ ಸುಮಾವಸಂತ.—ಸನ್ಮಾನ್ಯ ಅಧ್ಯಕ್ಷರೇ, ೩೧ ಸೇವಾ ಸಂಘಗಳು ನಷ್ಟದಲ್ಲಿ ಇದೆ ಎಂದು ಹೇಳಿದ್ದಾರೆ. ಸಾಕಷ್ಟು ಪ್ರಮಾಣದಲ್ಲಿ ಸಾಲದ ವ್ಯವಹಾರ ನಡೆಯದೆ ಮತ್ತು ಹಣದ ದುರುಪಯೋಗ ವಾಗಿರುವುದರಿಂದ ನಷ್ಟದಲ್ಲಿ ಇದೆ ಎಂದು ಹೇಳಿದ್ದಾರೆ. ಈ ಹಣ ದುರುಪಯೋಗ ಮಾಡಿದಂಥ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಅಧಿಕಾರಿಗಳು ಮತ್ತು ನಾನ್ ಆಫೀಷಿಯಲ್ಸ್ ಇದ್ದಾರೆ. ಇಬ್ಬರ ಮೇಲೂ ಕೂಡ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ.